

# ದೇವಗಂಗೆ ಕೊಳ

ಮೂರು ಮುಕ್ಕಾಲು ಶತಮಾನ ಕಳೆದರೂ ದೇವಗಂಗೆ ಕೊಳ ಸುಸ್ಥಿತಿಯಲ್ಲಿರುವುದು ಕೆಳದಿ ಅರಸರ ಕಾಲದ ತಂತ್ರಜ್ಞಾನ ಕೌಶಲಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಚಿತ್ರ– ಲೇಖನ:
**ಡಾ. ಶೇಖರ್ ಗೌಳೇರ್**

ಶಿವಮೊಗ್ಗ ಸಮೀಪದ ಬಿದನೂರು ಕೋಟೆಯಿಂದ ಕೇವಲ ನಾಲ್ಕು ಕಿಲೋ ಮೀಟರ್ ದೂರದ ದಾರಿ. ಕಲ್ಲು–ಮಣ್ಣಿನ ರಸ್ತೆಯಾದರೂ ಅಕ್ಕ–ಪಕ್ಕದಲ್ಲಿ ಕಬ್ಬಿನಗದ್ದೆ, ಕೇದಿಗೆವನ, ನೀರಿನ ಝುರಿಗಳಿವೆ. ಶ್ರೀಧರ್‌ಪುರ ಗ್ರಾಮ ದಾಟಿದರೆ ವಿಶಾಲ ಪ್ರಾಂಗಣದ ಪುಟ್ಟ ಕಬ್ಬಿಣದ ಗೇಟ್ ಮುಂದೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಾಮಫಲಕಗಳಲ್ಲಿ ದೇವಗಂಗೆ ಕೊಳದ ಸಂಕ್ಷಿಪ್ತ ಮಾಹಿತಿ ಕಾಣಿಸಿತು.

ಪ್ರಾಂಗಣ ಪ್ರವೇಶಿಸುತ್ತಿದ್ದಂತೆ ಮಲೆನಾಡಿನ ಸಾಂಪ್ರದಾಯಕ ಪುಟ್ಟ ಮನೆಯಂಥ ಈಶ್ವರ ದೇವಸ್ಥಾನ ಅದರ ಪಕ್ಕದಲ್ಲಿಯೇ ಪುರಾತನ ಪಾಳು ಬಿದ್ದ ಪಾಯ ಕಾಣಿಸಿತು. ದೇವಗಂಗೆ ಮತ್ತು ಇತರ ಕೊಳಗಳಿಗೆ ಇಳಿಯಲು ಪಶ್ಚಿಮ ಮತ್ತು ಪೂರ್ವದಿಕ್ಕಿಗೆ ತಲಾ ಹದಿನಾಲ್ಕು ಮೆಟ್ಟಿಲುಗಳ ಕಲ್ಲಿನ ಪಾವಟಿಗೆಗಳಿವೆ. ದೇವಗಂಗೆ ಕೊಳ ಕ್ರಿ.ಶ. 1640 ರಲ್ಲಿ ಕೆಳದಿಯ ರಾಣಿ ಚನ್ನಮ್ಮಾಜಿಯಿಂದ ನಿರ್ಮಾಣಗೊಂಡಿತು ಎಂಬುದು ಇತಿಹಾಸ. ದೇವಗಂಗೆ ಕೊಳದ ವಿಶಾಲ ಆವರಣದೊಳಗೆ ಸದಾ ಹರಿಯುವ ಸ್ಫಟಿಕದಂಥ, ಸಿಹಿನೀರಿನ ಕೊಳಗಳಿವೆ. ಸುಮಾರು ಮೂರು ಮುಕ್ಕಾಲು ಶತಮಾನ ಕಳೆದರೂ ದೇವಗಂಗೆ ಕೊಳ ಸುಸ್ಥಿತಿಯಲ್ಲಿದೆ.

ದೇವಗಂಗೆ ಎಂಬ ಕೊಳಕ್ಕೆ ನೀರು ಪೂರೈಕೆ ಎಲ್ಲಿಂದಾಗುತ್ತದೆ ಎಂಬ ಕುತೂಹಲವಿತ್ತು. ಆ ಪರಿಸರದಲ್ಲಿ ಒಂದೆರಡು ಸುತ್ತು ಹಾಕಿದ ಮೇಲೆ ಅದರ ಮರ್ಮ ಅರ್ಥವಾಯಿತು. ಕೆಳದಿಯ ಅರಸರು ಉತ್ತರ ದಿಕ್ಕಿನ ಬೆಟ್ಟದ ತಪ್ಪಲಿನಿಂದ ಹರಿದು ಬರುವ ಝುರಿಯ ನೀರನ್ನೇ ಮೇಲ್ಭಾಗದ ದೊಡ್ಡಕಲ್ಲಿನ ಹೊಂಡದಲ್ಲಿ ಸಂಗ್ರಹಿಸಿ ಕಲ್ಲಿನ ಕೊಳಾಯಿ ಮೂಲಕ ಕೆಳಕ್ಕೆ ಹರಿಸಿದ್ದಾರೆ. ಈಗಲೂ ನೀರಿನ ಸಂಗ್ರಹಾಗಾರದ ಪುಷ್ಕರಣಿ ದೇವಗಂಗೆ ಕೊಳದ ಮೇಲ್ಭಾಗದ ಒತ್ತುವರಿಯಾದ ಭೂಮಿಯ ತೋಟದಲ್ಲಿದೆ. ನೀರು ಅಲ್ಲಿಂದ ವರ್ಷವಿಡೀ ಕೊಳಗಳಿಗೆ ಹರಿಯುತ್ತದಾದ್ದರಿಂದ ಎಂದೂ ಬತ್ತುವುದಿಲ್ಲ.

ಕಲ್ಲಿನ ಕೊಳಾಯಿಯ ಮೂಲಕ ಹರಿದು ಬರುವ ನೀರು ಮೊದಲು ಉತ್ತರಭಾಗದ ಅಂತ್ಯದಲ್ಲಿರುವ ದೊಡ್ಡ ಕೊಳಕ್ಕೆ ಸೇರುತ್ತದೆ. ಕೊಳ ಆಯತಾಕಾರದಲ್ಲಿದ್ದು ತಿಳಿ ನೀರಿನಿಂದಾಗಿ ತಳವನ್ನು ನೋಡಬಹುದು. ವಿಶೇಷವೆಂದರೆ ಕೊಳದ ತಳಭಾಗದಲ್ಲಿ ಕಲ್ಲು ಚಪ್ಪಡಿಗಳನ್ನು ಹಾಕಿ ಜೋಡಿಸಿದ್ದಾರೆ. ನೀರಿನ ಆಳ ನಾಲ್ಕು ಅಡಿ. ಹೆಚ್ಚು ಹರಿದು ಬರುವ ನೀರನ್ನು ಹೊರಹೋಗುವಂತೆ ವ್ಯವಸ್ಥೆ ಮಾಡಿದ್ದಾರೆ. ಈ ಆಕರ್ಷಕ ಕೊಳದ ಮಧ್ಯ ಕುಳಿತುಕೊಳ್ಳಲು ಕಲ್ಲಿನ ಮಂಟಪ ರಚಿಸಿದ್ದಾರೆ. ಬೇಸಿಗೆಯ ದಿನಗಳಲ್ಲಿ ಮಧ್ಯಾಹ್ನ ಊರ ಮಕ್ಕಳು ಇಲ್ಲಿಗೆ ಈಜಲು ಬರುತ್ತಾರೆ.

ದೊಡ್ಡ ಈಜುಗೊಳದಿಂದ ಹೆಚ್ಚಾದ ನೀರು ನುಣುಪಾದ ಕಲ್ಲಿನ ಸಾರ(ಕಾಲುವೆ)ದ ಮೂಲಕ ಹರಿದು ಮತ್ತೊಂದು ಚೌಕಾಕಾರದ ತಳದ ಕೊಳಕ್ಕೆ ತಲುಪುತ್ತದೆ. ಮೊದಲ ಮತ್ತು ಎರಡನೇ ಕೊಳಗಳ ನಡುವೆ ಮಂಟಪದಾಕಾರದ ಆರು ಸ್ತಂಭಗಳಿವೆ. ದೊಡ್ಡ ಕೊಳವನ್ನು ಹೊರತುಪಡಿಸಿದರೆ ಒಟ್ಟು ಏಳು ಕೊಳಗಳಿವೆ. ನೀರು